# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು - 572 103

ಸಂಖ್ಯೆ:ತುವಿ:ಶೈವಿ:2021-22: -1148 ದಿನಾಂಕ:17.08.2021

ಗೆ,

ಅಧ್ಯಕ್ಷರು
ಎಲ್ಲಾ ಸ್ನಾತಕ ಅಧ್ಯಯನ ಮಂಡಳಿಗಳು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ವಿಷಯ : 2021–22ನೇ ಶೈಕ್ಷಣಿಕ ಸಾಲಿನಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅನುಷ್ಠಾನಗೊಳಿಸುವ ಕುರಿತು ಸಭೆಯನ್ನು ಏರ್ಪಡಿಸುವ ಕುರಿತು.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ:ಇಡಿ 260/ಯುಎನ್ಇ/2019(ಭಾಗ–1) ದಿನಾಂಕ:07.08.2021
2) ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 17.08.2021 (ಕಂಡಿಕೆ ಸಂಖ್ಯೆ:66 ಪುಟ ಸಂಖ್ಯೆ:15)

*****

2021–22ನೇ ಶೈಕ್ಷಣಿಕ ಸಾಲಿನಿಂದ ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಕಾರ 4 ವರ್ಷಗಳ ಪದವಿ ಕೋರ್ಸ್‌ಗಳನ್ನು ಪ್ರಾರಂಭಿಸಲು ಸರ್ಕಾರವು ಉಲ್ಲೇಖ (1) ರಲ್ಲಿ ಆದೇಶಿಸಿರುತ್ತದೆ. ರಾಷ್ಟ್ರೀಯ ಶಿಕ್ಷಣ ನೀತಿಯ ತತ್ವಗಳನ್ನು ಅಳವಡಿಸಿಕೊಂಡು ಬಹುಶಿಸ್ತೀಯ 4 ವರ್ಷಗಳ ಸ್ನಾತಕ ಪದವಿ ಕಾರ್ಯಕ್ರಮಗಳನ್ನು ಯೋಜಿಸುವುದರಲ್ಲಿ ಕರ್ನಾಟಕ ಮುಂದಿದೆ. 2021–22ನೇ ಸಾಲಿನಿಂದ ಸರಕಾರದ ಆದೇಶದಂತೆ ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಕಾರ 4 ವರ್ಷಗಳ ಪದವಿ ತರಗತಿಗಳು ಆರಂಭವಾಗುತ್ತಿರುವುದು ಎಲ್ಲರಿಗೂ ತಿಳಿದಿರುವ ವಿಷಯ.

ಈ ನಿಟ್ಟಿನಲ್ಲಿ ರಾಜ್ಯಮಟ್ಟದಲ್ಲಿ ತಜ್ಞರ ಸಮಿತಿಗಳು ವಿಷಯವಾರು ಪಠ್ಯಕ್ರಮಗಳನ್ನು ರೂಪಿಸುತ್ತಿವೆ. ಸಮನಾಂತರವಾಗಿ ವಿಶ್ವವಿದ್ಯಾನಿಲಯಗಳೂ ಕೂಡಾ ಕಾರ್ಯತತ್ಪರವಾಗಬೇಕಿದೆ. ತುಮಕೂರು ವಿಶ್ವವಿದ್ಯಾನಿಲಯದ ವಿಷಯವಾರು ಸ್ನಾತಕ ಅಧ್ಯಯನ ಮಂಡಳಿಗಳು ವಿಷಯವಾರು ಪಠ್ಯಕ್ರಮಗಳನ್ನು ಯೋಜಿಸಲು ತೊಡಗಲು ಸೂಚಿಸಿದೆ.

ರಾಜ್ಯಮಟ್ಟದ ವಿಷಯವಾರು ತಜ್ಞರ ಸಮಿತಿ ಸಲ್ಲಿಸುವ ಮಾದರಿ ಪಠ್ಯಕ್ರಮವನ್ನು ಸೂಕ್ತ ಬದಲಾವಣೆಗಳೊಂದಿಗೆ ವಿಶ್ವವಿದ್ಯಾನಿಲಯಗಳು ಅಳವಡಿಸಿಕೊಳ್ಳಬಹುದಾಗಿದೆ. ಆದರೆ ರಾಜ್ಯಮಟ್ಟದ ವಿಷಯವಾರು ತಜ್ಞರ ಸಮಿತಿಯಲ್ಲಿ ತುಮಕೂರು ವಿಶ್ವವಿದ್ಯಾನಿಲಯದ ಅನೇಕ ಪ್ರತಿನಿಧಿಗಳಿದ್ದು, ಅವರೊಂದಿಗೆ ನಿರಂತರವಾಗಿ ಸಮಾಲೋಚಿಸಿಕೊಂಡು ಬಿ.ಎ., ಬಿ.ಎಸ್ಸಿ, ಬಿ.ಕಾಂ, ಹಾಗೂ ಇನ್ನಿತರ ಕಾರ್ಯಕ್ರಮಗಳ ಮಾದರಿ ಚೌಕಟ್ಟನ್ನು ಗಮನದಲ್ಲಿಟ್ಟುಕೊಂಡು ತಮ್ಮ ತಮ್ಮ ಅಧ್ಯಯನ ಮಂಡಳಿಗಳ ಸರಣಿ ಸಭೆಗಳನ್ನು ನಡೆಸಿ ವಿಷಯವಾರು ಪಠ್ಯಕ್ರಮ ರಚನೆಯಲ್ಲಿ ತೊಡಗಬೇಕಾಗಿದೆ. 4 ವರ್ಷಗಳ ಕಾರ್ಯಕ್ರಮವನ್ನು ಗಮನದಲ್ಲಿಟ್ಟುಕೊಂಡು, ಅದನ್ನು 5ನೇ ವರ್ಷಕ್ಕೆ ವಿಸ್ತರಿಸಲು ಅನುಕೂಲವಾಗುವಂತೆ ಪಠ್ಯಯೋಜನೆಯನ್ನು ರೂಪಿಸಿ, ಪ್ರಸ್ತುತ ಮೊದಲನೇ ವರ್ಷದ ಪಠ್ಯಕ್ರಮವನ್ನು ತುರ್ತಾಗಿ ರೂಪಿಸಿ ಸಲ್ಲಿಸುವಂತೆ ಸೂಚಿಸಿದೆ.

**ಸೂಚನೆಗಳು:**

1. ಪತ್ರಿಕೆಗಳ ಶೀರ್ಷಿಕೆ ಹಾಗೂ ಪಠ್ಯಕ್ರಮ ರಚಿಸುವಾಗ ಯು.ಜಿ.ಸಿ ಜಾಲತಾಣದಲ್ಲಿ ಲಭ್ಯವಿರುವ LOCF/ CBCS ಕಡತಗಳನ್ನು ಆಕರಗಳಾಗಿ ಬಳಸಿಕೊಳ್ಳಬೇಕು.
2. 4 ವರ್ಷಗಳ ಪದವಿ ತರಗತಿಗಳ ಅಂತಿಮ ಎಂದರೆ ನಾಲ್ಕನೇ ವರ್ಷ 2 ವರ್ಷಗಳ ಸ್ನಾತಕೋತ್ತರ ಪದವಿಯ ಮೊದಲನೇ ವರ್ಷವಾಗಿರುವುದರಿಂದ ತಮ್ಮ ತಮ್ಮ ವಿಷಯಗಳಿಗೆ ಸಂಬಂಧಿಸಿದ ಸ್ನಾತಕೋತ್ತರ ಅಧ್ಯಯನ ಮಂಡಳಿಗಳ ಜೊತೆ ಸಮಾಲೋಚಿಸಿ ಕ್ರಮ ಕೈಗೊಳ್ಳಲು ತಿಳಿಸಿದೆ.
3. ಬಿ.ಎ. ಹಾಗೂ ಬಿ.ಎಸ್ಸಿ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳು ಎರಡು ವಿಷಯಗಳನ್ನು ಮುಖ್ಯವಿಷಯಗಳಾಗಿ ಹಾಗೂ ಇವೆರಡಕ್ಕೆ ಹೊರತಾದ ಒಂದು ಮುಕ್ತ ಆಯ್ಕೆ ಪತ್ರಿಕೆಯನ್ನು ಆಯ್ದುಕೊಳ್ಳುತ್ತಾರೆ.
4. ಕನ್ನಡ ಭಾಷಾ ಕಲಿಕೆ ಕಡ್ಡಾಯವಾಗಿದ್ದು ಹೊರರಾಜ್ಯದ/ ಪದವಿಪೂರ್ವದಲ್ಲಿ ಕನ್ನಡ ಕಲಿಯದ ವಿದ್ಯಾರ್ಥಿಗಳಿಗೆ ಕ್ರಿಯಾತ್ಮಕ (Functional) ಕನ್ನಡ ಕಡ್ಡಾಯವಾಗಿದೆ.
5. ಭಾರತದ ಸಂವಿಧಾನದ ಕುರಿತಾದ 2 ಕ್ರೆಡಿಟ್‌ಗಳ ಪತ್ರಿಕೆಯನ್ನು ರಾಜ್ಯಶಾಸ್ತ್ರ ಅಧ್ಯಯನ ಮಂಡಳಿ ರಾಜ್ಯಶಾಸ್ತ್ರಕ್ಕೆ ಸಂಬಂಧಿಸಿದ ಇತರೆ ಪಠ್ಯಕ್ರಮಗಳ ಜೊತೆಗೆ ರೂಪಿಸಬೇಕು.

ಪು.ತಿ.ನೋ.

6. ರಸಾಯನಶಾಸ್ತ್ರ ಹಾಗೂ ಜೀವವಿಜ್ಞಾನಕ್ಕೆ ಸಂಬಂಧಿಸಿದ ಅಧ್ಯಯನ ಮಂಡಳಿಗಳು ಸಮಾಲೋಚಿಸಿ ಪರಿಸರ ಅಧ್ಯಯನದ 2 ಕ್ರೆಡಿಟ್‌ಗಳ ಪತ್ರಿಕೆಯ ಪಠ್ಯಕ್ರಮವನ್ನು ರೂಪಿಸಬೇಕು.
7. ಗಣಕವಿಜ್ಞಾನಕ್ಕೆ ಸಂಬಂಧಿಸಿದ ಕೌಶಲ್ಯಾಭಿವೃದ್ಧಿ ಪತ್ರಿಕೆಗಳ ಪಠ್ಯಕ್ರಮವನ್ನು ಗಣಕವಿಜ್ಞಾನ ಅಧ್ಯಯನಮಂಡಳಿ ಗಣಕವಿಜ್ಞಾನಕ್ಕೆ ಸಂಬಂಧಿಸಿದ ಇತರೆ ಪಠ್ಯಕ್ರಮಗಳ ಜೊತೆಗೆ ರೂಪಿಸಬೇಕು.
8. ಒಬ್ಬ ವಿದ್ಯಾರ್ಥಿ ಮೊದಲ ನಾಲ್ಕು ಸೆಮಿಸ್ಟರ್‌ಗಳಲ್ಲಿ ಮುಕ್ತ ಆಯ್ಕೆ ಪತ್ರಿಕೆಯನ್ನು ಅಧ್ಯಯನ ಮಾಡಬೇಕು. ನಾಲ್ಕು ಸೆಮಿಸ್ಟರ್‌ಗಳಲ್ಲಿ ಒಂದೇ ವಿಷಯವನ್ನು ಮುಕ್ತ ಆಯ್ಕೆ ಪತ್ರಿಕೆಯನ್ನಾಗಿ ಆರಿಸಿಕೊಳ್ಳಬಹುದು ಅಥವಾ ಬೇರೆ ಬೇರೆ ವಿಷಯಗಳನ್ನು ಆರಿಸಿಕೊಳ್ಳಬಹುದು. ಹಾಗಾಗಿ ಎಲ್ಲಾ ಅಧ್ಯಯನ ಮಂಡಳಿಗಳು ತಮ್ಮ ತಮ್ಮ ವಿಷಯಕ್ಕೆ ಸಂಬಂಧಿಸಿದಂತೆ ಈ ಎರಡೂ ಸಾಧ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಮುಕ್ತ ಆಯ್ಕೆ ಪತ್ರಿಕೆಗಳ ಪಠ್ಯಕ್ರಮ ರೂಪಿಸಬೇಕು. ಮುಕ್ತ ಆಯ್ಕೆ ಪತ್ರಿಕೆಗಳ ಸಂಖ್ಯೆ ನಿರ್ದಿಷ್ಟವಲ್ಲ.
9. ಎಲ್ಲಾ ಕಾರ್ಯಕ್ರಮಗಳ ಮಾದರಿ ಚೌಕಟ್ಟುಗಳನ್ನು ಗಮನಿಸಿಕೊಂಡು ಎಲ್ಲಾ ವಿಷಯಗಳ ಅಧ್ಯಯನ ಮಂಡಳಿಗಳು ಕೌಶಲ್ಯಾಧಾರಿತ ಪತ್ರಿಕೆಗಳ ಪಠ್ಯಕ್ರಮವನ್ನೂ ರೂಪಿಸಬಹುದು.

ಈ ಎಲ್ಲಾ ಅಂಶಗಳಿಗೆ ಪೂರಕವಾಗಿ ತುಮಕೂರು ವಿಶ್ವವಿದ್ಯಾನಿಲಯದ ಎಲ್ಲಾ ಅಧ್ಯಯನ ಮಂಡಳಿಗಳು ತುರ್ತಾಗಿ ಕಾರ್ಯತತ್ಪರರಾಗಿ ಮೊದಲನೇ ವರ್ಷಕ್ಕೆ ಸಂಬಂಧಿಸಿದ ಪಠ್ಯಕ್ರಮಗಳನ್ನು ದಿನಾಂಕ: **06-09-2021ರ** ಒಳಗೆ ಸಲ್ಲಿಸಲು ಕೋರಲಾಗಿದೆ.

ಕರಡು ಪತ್ರವು ಮಾನ್ಯಕುಲಸಚಿವರಿಂದ ಅನುಮೋದಿಸಲ್ಪಟ್ಟಿದೆ.

ಆದೇಶದ ಮೇರೆಗೆ

Mangalahoni M.

ಉಪಕುಲಸಚಿವರು

ಉಪಕುಲಸಚಿವರು
ಶೈಕ್ಷಣಿಕ ವಿಭಾಗ
ತುಮಕೂರು ವಿಶ್ವವಿದ್ಯಾಲಯ
ತುಮಕೂರು

ಪ್ರತಿಗಳು:

1. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಕಚೇರಿ ಪ್ರತಿ.